# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಸಂಖ್ಯೆ: | 587(848) |
| ಸದಸ್ಯರ ಹೆಸರು: | ಶ್ರೀ ಎಂ.ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ: | 26.12.2022 |
| ಉತ್ತರಿಸುವ ಸಚಿವರು | ಮಾನ್ಯ ಪ್ರಾಥಮಿಕ ಮತ್ತು<br>ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| | ಕರ್ನಾಟಕ ರಾಜ್ಯದಲ್ಲಿ ಸಕಾಲ ಕಾರ್ಯಕ್ರಮ ಅನುಷ್ಠಾನ ಜಾರಿಗೆ ಬಂದು ಎಷ್ಟು ವರ್ಷಗಳಾಗಿವೆ ಮತ್ತು ಸಕಾಲದ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011 ಅನ್ನು ಅಧಿಸೂಚನೆ ಸಂಖ್ಯೆ:ಸಿಆಸುಇ 28 ಇಕಾಅ 2012, ದಿನಾಂಕ:28.03.2012 ರಂದು ಜಾರಿಗೆ ತರಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಸಕಾಲ ಕಾರ್ಯಕ್ರಮ ಅನುಷ್ಠಾನ ಜಾರಿಗೆ ಬಂದು **10** ವರ್ಷಗಳಾಗಿವೆ.<br><br>ಸಕಾಲದ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸರ್ಕಾರ ಕೈಗೊಂಡ ಕ್ರಮಗಳು.<br><br>• **ಸಕಾಲ ಸೂಚನಾ ಫಲಕಗಳು** - ಎಲ್ಲಾ ನಿಯೋಜಿತ ಕಛೇರಿಗಳು ತಮ್ಮ ತಮ್ಮ ಕಛೇರಿಗಳಲ್ಲಿ ನೀಡಲಾಗುವ ಕಾಲಮಿತಿ ಸೇವೆಗಳ ವಿವರಗಳನ್ನು ಪ್ರದರ್ಶಿಸಲು ಸಕಾಲ ಮಾಹಿತಿಯುಕ್ತ ಸೂಚನಾ ಫಲಕಗಳನ್ನು ಕಛೇರಿಗಳಲ್ಲಿ ಅಳವಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ.<br>• ಆಡಳಿತ ತರಬೇತಿ ಸಂಸ್ಥೆ, ಮೈಸೂರು ಮತ್ತು ಜಿಲ್ಲಾ ತರಬೇತಿ ಸಂಸ್ಥೆಗಳ ಸಹಯೋಗದೊಂದಿಗೆ ಸಕಾಲ ತರಬೇತಿ ಆಯೋಜಿಸಲಾಗಿದೆ.<br>• **ಸಕಾಲ ಸೇವಾ ಸಂಗ್ರಹ** - ಸಕಾಲ ಕಾಯ್ದೆಯನ್ನು ಸುಲಭವಾಗಿ ಜನರಿಗೆ ಮುಟ್ಟಿಸುವ ಒನ್ ಕ್ಲಿಕ್ ಜ್ಞಾನಭಂಡಾರ ಸಕಾಲ ವೆಬ್-ಸೈಟ್ ನಲ್ಲಿ ಸಕಾಲದ ಮೂಲಕ ಲಭ್ಯವಿರುವ ಎಲ್ಲಾ ಅಧಿಸೂಚಿತ ಸೇವೆಗಳ ಮಾಹಿತಿ ಸುಲಭ ಡೌನ್-ಲೋಡ್ ಗೆ ಲಭ್ಯವಿದೆ.<br>• **ಸಕಾಲ ತರಬೇತಿ ಕೈಪಿಡಿ** - ಅಧಿಕಾರಿಗಳನ್ನು ಜನಸ್ನೇಹಿ ಆಗಿಸುವುದು ಮತ್ತು ಹೊಸದಾಗಿ ನೇಮಕಗೊಂಡವರಿಗೆ ಸಕಾಲದ ನಿಯಮಗಳನ್ನು ಪರಿಚಯಿಸುವುದು.<br>• ನಿಯಮಿತವಾಗಿ ಸೇವೆಗಳ ಸೇರ್ಪಡೆ ಮತ್ತು ಮಾರ್ಪಾಡು.<br>• ನಾಗರೀಕರು ಮತ್ತು ಸರ್ಕಾರದೊಂದಿಗೆ ನೇರ ಸಂವಹನಕ್ಕೆ ಅನುಕೂಲವಾಗುವಂತೆ ಸಕಾಲ **ಫೋನ್-ಇನ್ ಕಾರ್ಯಕ್ರಮಗಳನ್ನು** ಸಹ ಪ್ರಸಾರ ಮಾಡಲಾಗುತ್ತದೆ. |
| 2 | ಸಕಾಲ ಯೋಜನೆಯಲ್ಲಿ ಅಧಿಕಾರಿಗಳು ಸಾರ್ವಜನಿಕರಿಗೆ ಸಮಯಕ್ಕೆ ಅನುಗುಣವಾಗಿ ಸೇವೆ ನೀಡದಿರುವ ಕಾರಣವೇನು; ಸಂಬಂಧಪಟ್ಟ ಅಧಿಕಾರಿ / ಸಿಬ್ಬಂದಿಯಿಂದ ಎಷ್ಟು ಹಣವನ್ನು ನಾಗರೀಕರಿಗೆ ಪರಿಹಾರ ರೂಪದಲ್ಲಿ ನೀಡಲಾಗಿದೆ; (ವಿವರ ನೀಡುವುದು) | 2012 ರಿಂದ ಅಕ್ಟೋಬರ್ 2022 ರ ಅಂತ್ಯಕ್ಕೆ ಒಟ್ಟು 28,75,34,805 ಅರ್ಜಿಗಳು ಸ್ವೀಕೃತವಾಗಿದ್ದು, ಇದರಲ್ಲಿ 28,57,07,962 ಅರ್ಜಿಗಳು ವಿಲೇವಾರಿಯಾಗಿರುತ್ತದೆ. ನಿಗದಿತ ಕಾಲಮಿತಿಯಲ್ಲಿ ಅರ್ಜಿಗಳನ್ನು ವಿಲೇ ಮಾಡಿದ ಪ್ರಮಾಣ ಶೇಕಡ 94.98 ಆಗಿರುತ್ತದೆ.<br><br>ಸಕಾಲ ಯೋಜನೆಯಲ್ಲಿ ಅಧಿಕಾರಿಗಳು ಸಾರ್ವಜನಿಕರಿಗೆ ಸಮಯಕ್ಕೆ ಅನುಗುಣವಾಗಿ ಸೇವೆಯನ್ನು ನೀಡದಿರುವುದಕ್ಕೆ ಕಾರಣಗಳು:-<br>1. ಹಲವು ಇಲಾಖೆಗಳಲ್ಲಿ ಕೆಲವು ಆಡಳಿತಾತ್ಮಕ ಕಾರಣಗಳಿಗಾಗಿ ಅರ್ಜಿಗಳು ಬಾಕಿ ಉಳಿದಿರುತ್ತವೆ.<br>2. ಕೆಲವೊಮ್ಮೆ ಅಗತ್ಯ ದಾಖಲೆಗಳನ್ನು ಅರ್ಜಿ ಸಲ್ಲಿಸುವ ಸಮಯದಲ್ಲಿ ಒದಗಿಸದಿದ್ದಲ್ಲಿ ಅಂತಹ ಅರ್ಜಿದಾರರಿಗೆ ದಾಖಲೆಗಳನ್ನು ಸಲ್ಲಿಸುವಂತೆ ಕೋರಲಾಗುತ್ತದೆ. ಅರ್ಜಿದಾರರು ದಾಖಲೆಗಳನ್ನು ಸಲ್ಲಿಸಲು ವಿಳಂಬ ಮಾಡಿದಲ್ಲಿ ಅಂತಹ ಅರ್ಜಿಗಳು ಬಾಕಿ ಉಳಿಯುತ್ತವೆ.<br>3. ಕೆಲವು ತಾಂತ್ರಿಕ ಕಾರಣಗಳಿಂದಾಗಿ ಅರ್ಜಿಗಳು ಬಾಕಿ ಉಳಿದಿರುತ್ತವೆ. |

| | | |
|---|---|---|
| | | ನಿಗದಿಪಡಿಸಲಾಗಿ ಸಮಯಕ್ಕೆ ಅನುಗುಣವಾಗಿ ಸೇವೆ ನೀಡದಿರುವ ವಿವಿಧ ಇಲಾಖೆಗಳ ಅಧಿಕಾರಿ/ಸಿಬ್ಬಂದಿಯಿಂದ ರೂ. 18,589/-ಗಳನ್ನು ಪರಿಹಾರ ವೆಚ್ಚ ಕೋರಿದ ನಾಗರೀಕರಿಗೆ ಪಾವತಿ ಮಾಡಲಾಗಿದೆ. (ವಿವರ ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ). |
| 3 | ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಸಕಾಲ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೈಗೊಂಡ ಕ್ರಮಗಳೇನು;(ವಿವರ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಸಕಾಲ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೈಗೊಂಡ ಕ್ರಮಗಳ ವಿವರಗಳು:-<br>• **ಸಕಾಲ ಅಪೀಲು ತ್ವರಿತ ಎಸ್‌ಎಂಎಸ್** – ಸಕಾಲದಲ್ಲಿ ಅಪೀಲುಗಳನ್ನು ಹೆಚ್ಚಿಸಲು ಉಪಕ್ರಮ. ಅರ್ಜಿ ವಿಳಂಬವಾದರೆ ಅಥವಾ ತಿರಸ್ಕೃತಗೊಂಡರೆ ಸಕಾಲದಲ್ಲಿ ಮೇಲ್ಮನವಿ ಸಲ್ಲಿಸಲು ಲಿಂಕ್ ನೊಂದಿಗೆ ಸ್ವಯಂಚಾಲಿತ ಪಠ್ಯ ಸಂದೇಶವನ್ನು ಅರ್ಜಿದಾರರ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುತ್ತಿದೆ.<br>• **ಸಕಾಲ ಸಮನ್ವಯ ಸಮಿತಿ** – ಬಾಕಿಉಳಿರುವಿಕೆ, ತಿರಸ್ಕಾರಗಳು, ಶೂನ್ಯ ರಶೀದಿ ಕಛೇರಿಗಳ ಮೇಲೆ ನಿಗಾ ಇಡುವುದು ಮತ್ತು ಸೇವೆಗಳ ಸಮಯೋಚಿತ ವಿಲೇವಾರಿಯನ್ನು ಖಚಿತಪಡಿಸಿಕೊಳ್ಳುವುದು. ಕಳೆದ 15 ತಿಂಗಳಲ್ಲಿ ಕರ್ನಾಟಕ ರಾಜ್ಯದಾದ್ಯಂತ 504 ಕ್ಕೂ ಹೆಚ್ಚು ಸಕಾಲ ಸಮನ್ವಯ ಸಮಿತಿ ಸಭೆಗಳನ್ನು ನಡೆಸಲಾಗಿದೆ.<br>• **ಸಕಾಲ ಮಿತ್ರ** – ಮನೆಮನೆಗೆ ಅರಿವು ಮೂಡಿಸಲು ಮತ್ತು ವಿದ್ಯಾರ್ಥಿ ಸ್ವಯಂಸೇವಕರ ಮೂಲಕ ನಾಗರೀಕರ ಅಗತ್ಯ ಅಧ್ಯಯನವನ್ನು ನಡೆಸಲು ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಒಂದು ಐ.ಇ.ಸಿ ಉಪಕ್ರಮ.<br>• **ತೇಜ್ ನಲ್ಲಿ (TesZ) ಸಕಾಲ** – ನಾಗರೀಕರ ಪ್ರಶ್ನೆಗಳನ್ನು ಪರಿಹರಿಸಲು ಡಿಜಿಟಲ್ ಫ್ಲಾಟ್ ಫಾರ್ಮ್. ಈ ಉಪಕ್ರಮದಿಂದ 3,08,727 ಕ್ಕೂ ಹೆಚ್ಚು ನಾಗರೀಕರು ಇದರ ಪ್ರಯೋಜನ ಪಡೆದಿದ್ದಾರೆ. ಸಕಾಲ ಮಿಷನ್ ನಿಂದ 9,609 ಕ್ಕೂ ಹೆಚ್ಚು ಮೆಚ್ಚುಗೆಯನ್ನು ಸ್ವೀಕರಿಸಲಾಗಿದೆ. https://www.tesz.in/profile/sakala https://tesz.in/profile/saka a<br>• **ಸಕಾಲ ಜನಧ್ವನಿ** - ಡಿಜಿಟಲ್ ಮಾಧ್ಯಮ/ಸಾಮಾಜಿಕ ಮಾಧ್ಯಮ ವೇದಿಕೆಗಳ ಮೂಲಕ ಸಕಾಲದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಲು ಸಕಾಲ ಸಾಮಾಜಿಕ ಮಾಧ್ಯಮ ಅಭಿಯಾನಗಳು.<br>• **ಸಕಾಲ ಇಂಟರ್ನ್‌ಷಿಪ್ ಕಾರ್ಯಕ್ರಮ** - ಪದವೀದರರು/ಸ್ನಾತಕೋತ್ತರ ಪದವೀದರರಿಗೆ ಕಲಿಯಲು ಮತ್ತು ಭಾರತದ ಅತಿದೊಡ್ಡ ಸಾರ್ವಜನಿಕ ವಲಯದ ಸೇವಾ ಘಟಕಕ್ಕೆ ಕೊಡುಗೆ ನೀಡಲು ಅವಕಾಶ.<br>• **ಸಕಾಲ ಕಿಯೋಸ್ಕ್** - ಮುಖರಹಿತ ಮತ್ತು ನಗದು ರಹಿತ ಸೇವೆಗಳ ವಿತರಣೆಯನ್ನು ಉತ್ತೇಜಿಸಲು ಪ್ರಾಯೋಗಿಕ ಆಧಾರದ ಮೇಲೆ 10 ಯಂತ್ರಗಳನ್ನು ಖರೀದಿಸಲಾಗಿದೆ.<br>• **ಸಕಾಲ ಸಪ್ತಾಹ** - ಸೇವಾ ಅರ್ಜಿಗಳ ತ್ವರಿತ ವಿಲೇವಾರಿಯನ್ನು ಉತ್ತೇಜಿಸುವ ಉಪಕ್ರಮ, ಬಾಕಿ ಉಳಿದಿರುವ ಎಲ್ಲಾ ಅರ್ಜಿಗಳ ವಿಲೇವಾರಿ ಪ್ರಕ್ರಿಯೆಯನ್ನು ಚುರುಕುಗೊಳಿಸಲು ಪ್ರತಿ ಐದು ವರ್ಷಗಳಿಗೊಮ್ಮೆ ಸಕಾಲ ಸಪ್ತಾಹವನ್ನು ಆಯೋಜಿಸಲಾಗುತ್ತಿದೆ.<br>• **ಖಾತಾ ಸರ್ವೀಸ್ ರಿಫಾರ್ಮ್** - ಖಾತಾ ಅಪ್ಲಿಕೇಶನ್ ರೈಸಿಂಗ್ ಪ್ರಕ್ರಿಯೆಯ ಸಮಯದಲ್ಲಿ ಮೂರನೇ ವ್ಯಕ್ತಿಯ ಮಧ್ಯ ಪ್ರವೇಶವನ್ನು ಕಡಿಮೆ ಮಾಡಲು ಸಕಾಲ ನೇಮ್ ಮ್ಯಾಚರ್ ವೈಶಿಷ್ಟ್ಯವನ್ನು ಪರಿಚಯಿಸಲಾಗಿದೆ. |

ಸಂಖ್ಯೆ: ಸಿಆಸುಇ 77 ಎಸ್‌ಎಂಎಸ್ 2022

(ಬಿ.ಸಿ.ನಾಗೇಶ್)
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು

ಅನುಬಂಧ-1

# Department Wise Compensation Details (2012 to 2022)

| Sl No | Department Name | Amount paid to citizen |
|---|---|---|
| 1 | BANGALORE DEVELOPMENT AUTHORITY | 4900 |
| 2 | BANGALORE WATER SUPPLY AND SEWERAGE BOARD | 20 |
| 3 | BENGALURU ELECTRICITY SUPPLY COMPANY LIMITED | 20 |
| 4 | BRUHAT BANGALORE MAHANAGARA PALIKE | 4030 |
| 5 | CITY CORPORATION (Other than BBMP) | 40 |
| 6 | CITY MUNICIPAL COUNCIL | 3320 |
| 7 | COMMERCE AND INDUSTRIES DEPARTMENT | 20 |
| 8 | COMMERCIAL TAXES DEPARTMENT | 40 |
| 9 | DEPARTMENT OF PUBLIC INSTRUCTION | 9240 |
| 10 | FOOD AND CIVIL SUPPLIES DEPARTMENT | 60 |
| 11 | HOME DEPARTMENT | 1060 |
| 12 | INSPECTOR GENERAL OF REGISTRATION AND STAMPS | 106540 |
| 13 | REVENUE DEPARTMENT | 163375 |
| 14 | RURAL DEVELOPMENT AND PANCHAYAT RAJ DEPARTMENT | 21982 |
| 15 | SURVEY AND SETTELMENT COMMISSIONER | 3202 |
| 16 | TOWN MUNICIPAL COUNCIL | 100 |
| 17 | TRANSPORT DEPARTMENT | 640 |
| **Grand Total** | | **318589** |

# District Wise Compensation Details (2012 to 2022)

| Sl No | District Name | Amount paid to citizen |
|---|---|---|
| 1 | Bagalkot | 1860 |
| 2 | Ballari | 10680 |
| 3 | Belagavi | 22783 |
| 4 | Bengaluru | 56610 |
| 5 | Bengaluru Rural | 1800 |
| 6 | Bidar | 7421 |
| 7 | Chamarajanagar | 581 |
| 8 | Chikkaballapura | 860 |
| 9 | Chikkamagaluru | 6520 |
| 10 | Chitradurga | 95820 |
| 11 | Dakshina Kannada | 23 |
| 12 | Davanagere | 941 |
| 13 | Dharwad | 2500 |
| 14 | Gadag | 541 |
| 15 | Hassan | 6341 |
| 16 | Haveri | 1880 |
| 17 | Kalaburagi | 14902 |
| 18 | Kodagu | 40 |
| 19 | Kolar | 5021 |
| 20 | Koppal | 5680 |
| 21 | Mandya | 3941 |
| 22 | Mysuru | 8480 |
| 23 | Raichur | 6020 |
| 24 | Ramanagara | 340 |
| 25 | Shivamogga | 4940 |
| 26 | Tumakuru | 6784 |
| 27 | Udupi | 2420 |
| 28 | Uttara Kannada | 440 |
| 29 | Vijayanagara | 26720 |
| 30 | Vijayapura | 11980 |
| 31 | Yadgir | 3720 |
| **Grand Total** | | **318589** |